**ಆಪರೇಷನ್ ಬ್ರಹ್ಮ ಕುರಿತು ಪತ್ರಿಕಾಗೋಷ್ಠಿ (2000 ಗಂಟೆಗಳು, ಏಪ್ರಿಲ್ 01, 2025)**

ಏಪ್ರಿಲ್ 01, 2025

2025 ರ ಮಾರ್ಚ್ 28 ರಂದು ಮ್ಯಾನ್ಮಾರ್‌ಗೆ ಅಪ್ಪಳಿಸಿದ ವಿನಾಶಕಾರಿ ಭೂಕಂಪದ ಹಿನ್ನೆಲೆಯಲ್ಲಿ ಶೋಧ ಮತ್ತು ರಕ್ಷಣೆ (SAR), ಮಾನವೀಯ ನೆರವು, ವಿಪತ್ತು ಪರಿಹಾರ ಮತ್ತು ವೈದ್ಯಕೀಯ ನೆರವು ಸೇರಿದಂತೆ ಅಗತ್ಯ ಬೆಂಬಲವನ್ನು ಒದಗಿಸಲು ಭಾರತವು ಆಪರೇಶನ್ ಬ್ರಹ್ಮವನ್ನು ಪ್ರಾರಂಭಿಸಿದೆ. ನೆರೆಹೊರೆಯ ಬಿಕ್ಕಟ್ಟಿನ ಸಮಯದಲ್ಲಿ ಮೊದಲ ಪ್ರತಿಸ್ಪಂದಕವಾಗಿರುವ ಭಾರತವು, ಮ್ಯಾನ್ಮಾರ್‌ನಲ್ಲಿ ಆಗಿರುವ ವ್ಯಾಪಕ ವಿನಾಶಕ್ಕೆ ಪ್ರತಿಕ್ರಿಯಿಸಲು ಸಂಪೂರ್ಣ ಸರ್ಕಾರಿ ಪ್ರಯತ್ನವಾಗಿ ಆಪರೇಶನ್ ಬ್ರಹ್ಮವನ್ನು ಘೋಷಿಸಲಾಗಿದೆ. ಇಲ್ಲಿಯವರೆಗೆ, ಆರು ವಿಮಾನಗಳು ಮತ್ತು ಐದು ಭಾರತೀಯ ನೌಕಾಪಡೆಯ ಹಡಗುಗಳು 625 ಮೆಟ್ರಿಕ್ ಟನ್ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (HADR) ಸಾಮಗ್ರಿಗಳನ್ನು ತಲುಪಿಸಿವೆ.

2. ಭಾರತವು C-130 J ವಿಮಾನದ ಮೂಲಕ ಮೊದಲ ಹಂತದ HADR ಸಾಮಗ್ರಿಗಳನ್ನು ಮ್ಯಾನ್ಮಾರ್‌ಗೆ ತಲುಪಿಸಿದ್ದು, ಸಾಮಗ್ರಿಗಳನ್ನು ಒಳಗೊಂಡ ವಿಮಾನವು 2025 ರ ಮಾರ್ಚ್ 29 ರಂದು ಬೆಳಗ್ಗೆ 7:30 ಕ್ಕೆ ಯಾಂಗೋನ್ ತಲುಪಿದೆ. ಈ ವಿಮಾನವು NDRF ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಪೂರೈಸಿದ ಟೆಂಟ್‌ಗಳು, ಕಂಬಳಿಗಳು, ಅಗತ್ಯ ಔಷಧಿಗಳು ಮತ್ತು ಆಹಾರದಂತಹ 15 ಟನ್ ಸರಬರಾಜುಗಳನ್ನು ಒಳಗೊಂಡಿತ್ತು.

3. ಎರಡನೇ ಹಂತದಲ್ಲಿ, ಎರಡು IAF C-130J ವಿಮಾನಗಳಲ್ಲಿ NDRF ನ 80 ಶೋಧ ಮತ್ತು ರಕ್ಷಣಾ (SAR) ತಜ್ಞರು, ಉಪಕರಣಗಳು ಮತ್ತು ಪರಿಹಾರ ಸಾಮಗ್ರಿಗಳನ್ನು ಕಳುಹಿಸಲಾಯಿತು. ಒಂದು ವಿಮಾನವು 17 ಟನ್‌ನಷ್ಟು ವೈಯಕ್ತಿಕ ರಕ್ಷಣಾ ಉಪಕರಣಗಳು, ಹುಡುಕಾಟ ಮತ್ತು ಸಂವಹನ ಉಪಕರಣಗಳು ಮತ್ತು ರಕ್ಷಣಾ ಉಪಕರಣಗಳನ್ನು ಹೊಂದಿದ್ದರೆ ಮತ್ತೊಂದು ವಿಮಾನವು 5 ಟನ್ HADR ಸಾಮಗ್ರಿಗಳಾದ ಜೆನ್‌ಸೆಟ್‌ಗಳು, ನೈರ್ಮಲ್ಯ ಕಿಟ್‌ಗಳು, ಆಹಾರ ಪ್ಯಾಕೆಟ್‌ಗಳು, ಅಗತ್ಯ ಔಷಧಿಗಳು, ಅಡುಗೆಮನೆ ಸೆಟ್‌ಗಳು, ಕಂಬಳಿಗಳು ಇತ್ಯಾದಿಗಳನ್ನು ಹೊಂದಿತ್ತು. ಈ ವಿಮಾನಗಳು 2025 ರ ಮಾರ್ಚ್ 30 ರಂದು ನೈಪಿಡಾವ್ ತಲುಪಿದವು.

4. ಎರಡು IAF C-17 ವಿಮಾನಗಳನ್ನು ಒಳಗೊಂಡ ಮೂರನೇ ಹಂತದ ನೆರವು, 118 ಸದಸ್ಯರ ಭಾರತೀಯ ಸೇನಾ ಕ್ಷೇತ್ರ ಆಸ್ಪತ್ರೆ ತಂಡವನ್ನು, ಜೊತೆಗೆ 60 ಟನ್‌ಗಳಷ್ಟು ಸರಬರಾಜನ್ನು ಪೀಡಿತ ಪ್ರದೇಶಕ್ಕೆ ತಲುಪಿಸಿದವು. ಇವುಗಳಲ್ಲಿ ವೇಗವಾಗಿ ನಿಯೋಜಿಸಬಹುದಾದ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ಆಶ್ರಯಗಳು, ನೀರಿನ ಶುದ್ಧೀಕರಣ ಮತ್ತು ನೈರ್ಮಲ್ಯ ಸೇವೆಗಳು ಮತ್ತು ಪ್ರಮುಖವಾಗಿ ಮಹಿಳೆಯರು ಮತ್ತು ಮಕ್ಕಳ ಆರೈಕೆ ಸೇವೆಗಳಿದ್ದವು. ಈ ವಿಮಾನಗಳು ಕೂಡಾ 2025 ರ ಮಾರ್ಚ್ 30 ರಂದು ನೈಪಿಡಾವ್ ತಲುಪಿದವು.

ಮ್ಯಾಂಡಲೇಯಲ್ಲಿ 200 ಹಾಸಿಗೆಯ ಕ್ಷೇತ್ರ ಆಸ್ಪತ್ರೆಯು ಈಗ ಕಾರ್ಯಾಚರಣೆಯಲ್ಲಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ ಮತ್ತು ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದೆ.

5. ಭಾರತೀಯ ನೌಕಾಪಡೆಯ ಹಡಗುಗಳಾದ ಸತ್ಪುರ ಮತ್ತು ಸಾವಿತ್ರಿ, 2025 ರ ಮಾರ್ಚ್ 29 ರಂದು ಪೂರ್ವ ನೌಕಾ ಕಮಾಂಡ್‌ನಿಂದ 40 ಟನ್ HADR ವಸ್ತುಗಳನ್ನು ಹೊತ್ತು ಯಾಂಗೋನ್‌ಗೆ ಸಾಗಿದವು. 2025 ರ ಮಾರ್ಚ್ 31 ರಂದು ಸಾಮಗ್ರಿಗಳನ್ನು ಯಾಂಗೋನ್ ಮುಖ್ಯಮಂತ್ರಿ ಅವರಿಗೆ ಹಸ್ತಾಂತರಿಸಲಾಯಿತು. ಭಾರತೀಯ ನೌಕಾಪಡೆಯ ಕಾರ್ಮುಕ್ ಮತ್ತು LCU 52 ಹಡಗುಗಳು 2025 ರ ಮಾರ್ಚ್ 30 ರಂದು, ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್‌ನಿಂದ  ಯಾಂಗೋನ್‌ನತ್ತ ಪಯಣ ಬೆಳೆಸಿದವು. ಇವುಗಳಲ್ಲಿ ಅಗತ್ಯ ಉಡುಪುಗಳು, ಕುಡಿಯುವ ನೀರು, ಆಹಾರ, ಔಷಧಿಗಳು ಮತ್ತು ತುರ್ತು ಸಾಮಗ್ರಿಗಳನ್ನು ಒಳಗೊಂಡ HADR ಪ್ಯಾಲೆಟ್‌ಗಳು ಸೇರಿದಂತೆ 30 ಟನ್ ಪರಿಹಾರ ಸಾಮಗ್ರಿಗಳಿದ್ದವು. ಇವುಗಳನ್ನು 2025 ರ ಏಪ್ರಿಲ್ 1 ರಂದು ಯಾಂಗೋನ್ ಬಂದರಿನಲ್ಲಿ ಹಸ್ತಾಂತರಿಸಲಾಯಿತು.

6. ಇಂದು, ಏಪ್ರಿಲ್ 1, 2025 ರಂದು, ಆಪರೇಶನ್ ಬ್ರಹ್ಮ ಕಾರ್ಯಾಚರಣೆಯನ್ನು ಮುಂದುವರಿಸುತ್ತಾ, ಬಾಧಿತ ಜನರ ತಕ್ಷಣದ ಅಗತ್ಯಗಳನ್ನು ಪೂರೈಸಲು ನಿರ್ಣಾಯಕ ಪೂರೈಕೆಗಳು ಸೇರಿದಂತೆ ಹೆಚ್ಚಿನ ಸಹಾಯವನ್ನು ಭಾರತವು ರವಾನಿಸಿದೆ. IAF C-130J ವಿಮಾನವು ಟೆಂಟ್‌ಗಳು, ಜೆನ್‌ಸೆಟ್‌ಗಳು, ಕುಡಿಯುವ ನೀರು, ಆಹಾರ ಮತ್ತು ತುರ್ತು ಔಷಧಿಗಳಂತಹ ಪ್ರಮುಖ ಸರಬರಾಜುಗಳು ಸೇರಿದಂತೆ 16 ಟನ್ HADR ವಸ್ತುಗಳನ್ನು ಹೊತ್ತು ಇಂದು ಮ್ಯಾಂಡಲೇಯಲ್ಲಿ ಇಳಿದಿದ್ದು, ವಿಪತ್ತಿನಿಂದ ಬಾಧಿತರಾದವರ ತುರ್ತು ಅಗತ್ಯಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.

7. ಇದಲ್ಲದೆ, 2025 ರ ಏಪ್ರಿಲ್ 1 ರಂದು ವಿಶಾಖಪಟ್ಟಣಂ ಬಂದರಿನಿಂದ ಭಾರತೀಯ ನೌಕಾಪಡೆಯ ಹಡಗು ಘರಿಯಾಲ್ ಯಾಂಗೋನ್ ಕಡೆಗೆ ಪಯಣ ಬೆಳೆಸಿದೆ. ಈ ಹಡಗು 405 ಮೆಟ್ರಿಕ್ ಟನ್ ಅಕ್ಕಿ, 30 ಮೆಟ್ರಿಕ್ ಟನ್ ಅಡುಗೆ ಎಣ್ಣೆ, 5 ಮೆಟ್ರಿಕ್ ಟನ್ ಬಿಸ್ಕೆಟ್‌ಗಳು ಮತ್ತು 2 ಮೆಟ್ರಿಕ್ ಟನ್ ತ್ವರಿತ ನೂಡಲ್ಸ್ ಸೇರಿದಂತೆ 442 ಮೆಟ್ರಿಕ್ ಟನ್ ಆಹಾರ ಸಹಾಯವನ್ನು ತಲುಪಿಸಲಿದೆ. ಈ ಸರಬರಾಜುಗಳು ಮ್ಯಾನ್ಮಾರ್‌ನ ಬಾಧಿತ ಜನಸಂಖ್ಯೆಯ ತಕ್ಷಣದ ಆಹಾರದ ಅಗತ್ಯಗಳನ್ನು ಪೂರೈಸುವ ಉದ್ದೇಶ ಹೊಂದಿವೆ.

8. ವಾಸ್ತವ ಪರಿಸ್ಥಿತಿಯ ಅಗತ್ಯಗಳು ಮತ್ತು ಅವಶ್ಯಕತೆಗಳ ಆಧಾರದ ಮೇಲೆ ಮ್ಯಾನ್ಮಾರ್‌ಗೆ ಹೆಚ್ಚಿನ ವಸ್ತುಗಳ ನೆರವು ಮತ್ತು ಸಂಪನ್ಮೂಲಗಳನ್ನು ನೀಡಲು ಭಾರತ ಸಿದ್ಧವಾಗಿದೆ. ಆಪರೇಶನ್ ಬ್ರಹ್ಮ ಅಡಿಯಲ್ಲಿ ಭಾರತ ನಡೆಸುತ್ತಿರುವ ಪ್ರಯತ್ನಗಳು ನೆರೆಹೊರೆಯ ದೇಶಗಳಲ್ಲಿನ ನೈಸರ್ಗಿಕ ವಿಪತ್ತುಗಳಿಗೆ ತ್ವರಿತವಾಗಿ ಮತ್ತು ಸಂಪೂರ್ಣ ರೀತಿಯಲ್ಲಿ ಪ್ರತಿಕ್ರಿಯಿಸುವ ತನ್ನ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ. ಮೊದಲ ಪ್ರತಿಸ್ಪಂದಕ ದೇಶವಾಗಿ,

ಭಾರತವು ನೆರೆಹೊರೆ ಮೊದಲು ಮತ್ತು ಆ್ಯಕ್ಟ್ ಈಸ್ಟ್ ನೀತಿಯ ಪ್ರಮುಖ ಪಾಲುದಾರವಾದ ಮ್ಯಾನ್ಮಾರ್ ಸಹಾಯಕ್ಕೆ ನಿಂತಿದೆ.

ನವದೆಹಲಿ

ಏಪ್ರಿಲ್ 01, 2025